## ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೇಶವ ಪ್ರಸಾದ್ .ಎಸ್, ಇವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ.

### ವಿಷಯ

ವಿಜಯವಾಣಿ ಪತ್ರಿಕೆಯಲ್ಲಿ 'ಡಿಡಿಪಿಐ ಲಾಗಿನ್ ಕದ್ದು ಮಾನ್ಯತೆ ನವೀಕರಣ!" ಸರ್ಕಾರಿ ಆನ್ ಲೈನ್ ವ್ಯವಸ್ಥೆಗಿಲ್ಲ ಭದ್ರತೆ । ಸಮಗ್ರ ತನಿಖೆಗಾಗಿ ಪೊಲೀಸರ ಮೊರೆ.! ಮಾನ್ಯತೆ ನವೀಕರಣ ಹಗರಣ? ಎಂಬ ತಲೆ ಬರಹಡಿಯಲ್ಲಿ ಪ್ರಕಟಗೊಂಡ ಸರಣಿ ವರದಿಯನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ಕೋರುತ್ತೇನೆ.

ವಿಜಯಪುರ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಸರ್ಕಾರದ ತಂತ್ರಾಂಶ ದುರ್ಬಳಕೆಯಾಗಿರುವ ಗಂಭೀರ ಪ್ರಕರಣ ಬೆಳಕಿಗೆ ಬಂದಿದೆ. ಇಲಾಖೆ ಉಪ ನಿರ್ದೇಶಕರ ತಂತ್ರಾಂಶವನ್ನೇ ದುರ್ಬಳಕೆ ಮಾಡಿಕೊಂಡು ಶಾಲೆಗಳ ಮಾನ್ಯತೆ ನವೀಕರಣಗೊಳಿಸಲಾಗಿದೆ! ಡಿಡಿಪಿಐಗೆ ಗೊತ್ತಿಲ್ಲದಂತೆ ಅವರ ಲಾಗಿನ್ ವಿವರ, ಪಾಸ್‌ವರ್ಡ್ ದುರುಪಯೋಗ ಪಡಿಸಿಕೊಂಡು, ಸರ್ಕಾರದ ಡಿಜಿಟಲ್ ವ್ಯವಸ್ಥೆಗೆ ಅನಧಿಕೃತವಾಗಿ ಪ್ರವೇಶಿಸಿ ಅನುದಾನಿತ. ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮಾನ್ಯತೆ ನವೀಕರಣ, ಪ್ರಥಮ ಮಾನ್ಯತೆ ಕುರಿತಂತೆ ಆನ್‌ಲೈನ್ ತಂತ್ರಾಂಶದಲ್ಲಿ ಒಪ್ಪಿಗೆ ನೀಡುವ ಹಾಗೂ ಮಂಜೂರು ಮಾಡುವ ಕಾರ್ಯ ಮಾಡಲಾಗಿದೆ. ಆದರೆ, ಡಿಡಿಪಿಐ ತಾವು ಅನುಮೋದನೆ ನೀಡಿಯೇ ಇಲ್ಲ. ಅಸಲಿಗೆ ತಮ್ಮ ಗಮನಕ್ಕೆ ಬಂದೇ ಇಲ್ಲವೆಂದು ತಿಳಿಸಿದ್ದಾರೆ.

ಗಂಭೀರವಾದ ಅಧಿಕಾರ ದುರುಪಯೋಗದ ಈ ಕೃತ್ಯಕ್ಕೆ ಸಂಬಂಧಿಸಿದಂತೆ ಸಮಗ್ರ ತನಿಖೆ ನಡೆಸಿ ನಂಬಿಕೆ ದ್ರೋಹ ಮಾಡಿದವರನ್ನು, ಆಡಳಿತಾತ್ಮಕವಾಗಿ ಅಕ್ರಮ ನಡೆಸಿದವರನ್ನು ಪತ್ತೆ ಹಚ್ಚುವಂತೆ ಫೆ. 25ರಂದೇ ಪೊಲೀಸರಿಗೆ ದೂರು ನೀಡಿದ್ದಾರೆ. ಮುಂದುವರೆದು ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರ ತಂತ್ರಾಂಶವನ್ನೇ ದುರ್ಬಳಕೆ ಮಾಡಿಕೊಂಡು ಮಾನ್ಯತೆ ನವೀಕರಣಗೊಳಿಸಿದ ಪ್ರಕರಣಕೆ ಸಂಬಂಧಿಸಿದಂತೆ ಕಾಂಗ್ರೆಸ್ ಶಾಸಕರೊಬ್ಬರು ಬರೆದ ಪತ್ರ ತೀವ್ರ ಕುತೂಹಲ ಕೆರಳಿಸಿದ್ದಲ್ಲದೆ ಶಾಲೆಯ ಮಾನ್ಯತೆ ನವೀಕರಣದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆದಿರುವ ಗುಮಾನಿ ಕಾಡುತ್ತಿದೆ ಆದ್ದರಿಂದ ಶಿಕ್ಷಣ ಸಚಿವರು ತಕ್ಷಣವೇ ಸ್ಪಷ್ಟನೆ ನೀಡಬೇಕು ಎಂದು ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರನ್ನು ಕೋರುತ್ತೇನೆ.

### ಉತ್ತರ

ಶಾಲಾ ಶಿಕ್ಷಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಖಾಸಗಿ ಶಾಲೆಗಳ 2025-26ನೇ ಸಾಲಿನ ಪ್ರಥಮ/ಮಾನ್ಯತೆ ನವೀಕರಣಕ್ಕಾಗಿ ಇಲಾಖೆಯ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಿ. ಆಯುಕ್ತರು ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರ ದಿನಾಂಕ: 18/10/2025 ಹಾಗೂ 26/11/2025ರಂದು ಸುತ್ತೋಲೆ ಹೊರಡಿಸಿರುತ್ತಾರೆ.

ಸದರಿ ಸುತ್ತೋಲೆಯಂತೆ ಆಡಳಿತ ಮಂಡಳಿಯವರು ತಂತ್ರಾಂಶದ ಮೂಲಕ ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿ ಪ್ರಥಮ ಮಾನ್ಯತೆ/ಮಾನ್ಯತೆ ನವೀಕರಣ ಪ್ರಸ್ತಾವನೆಗಳನ್ನು ಆನ್ ಲೈನ್ ತಂತ್ರಾಂಶದ ಮೂಲಕ ಸಲ್ಲಿಸಿರುವುದನ್ನು, ಪರಿಶೀಲಿಸಿ, ಅನುಮತಿ/ತಿರಸ್ಕೃತಗೊಳಿಸುವ ಬಗ್ಗೆ

ಉಪನಿರ್ದೇಶಕರು (ಆಡಳಿತ) ರವರು ತಮ್ಮ ಮೊಬೈಲ್ ಗೆ ಸ್ವೀಕೃತವಾಗುವ ಒ.ಟಿ.ಪಿ ಯನ್ನು ನಮೂದಿಸಿ, ಪ್ರಕರಣದಲ್ಲಿ ಅಂತಿಮ ಕ್ರಮ ವಹಿಸಬೇಕಾಗುತ್ತದೆ. ಆದರೆ, ವಿಜಯಪುರ ಜಿಲ್ಲೆಗೆ ಸಂಬಂಧಿಸಿದಂತೆ, ಒಟ್ಟು 56 ಶಾಲೆಗಳಿಗೆ ಸಂಬಂಧಿಸಿದ ಪ್ರಥಮ/ಮಾನ್ಯತೆ ನವೀಕರಣ ಪ್ರಕರಣಗಳಲ್ಲಿ ಸಕ್ಷಮ ಪ್ರಾಧಿಕಾರವಾದ ಉಪನಿರ್ದೇಶಕರಿಗೆ ಯಾವುದೇ ಒ.ಟಿ.ಪಿ ಸ್ವೀಕೃತವಾಗದೇ, ದಿನಾಂಕ:24-11-2025 ರಿಂದ 19-12-2025 ರ ಅವಧಿಯಲ್ಲಿ ಒಟ್ಟು 56 ಖಾಸಗಿ ಶಾಲೆಗಳಿಗೆ ಪ್ರಥಮ/ಮಾನ್ಯತೆ ನವೀಕರಣ ಪ್ರಕರಣಗಳು ಅನುಮೋದನೆಯಾಗಿರುವುದನ್ನು ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ ಇವರಿಗೆ ಉಪ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ವಿಜಯಪುರ ಇವರು ದಿನಾಂಕ: 16-01-2026ರಂದು ವರದಿ ಮಾಡಿ, ಈ ಪ್ರಕರಣದಲ್ಲಿ ಸೂಕ್ತ ತನಿಖೆಗಾಗಿ ಎಫ್.ಐ.ಆರ್ ನ್ನು ದಾಖಲಿಸಲು ಅನುಮತಿ ಕೋರಿರುತ್ತಾರೆ. ಅದರಂತೆ ಅಪರ. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ ಇವರು ದಿನಾಂಕ: 29-01-2026ರಂದು ಸಂಬಂಧಿಸಿದ ನೌಕರರು/ಅಧಿಕಾರಿಗಳ ವಿರುದ್ಧ ಹತ್ತಿರದ ಪೊಲೀಸ್ ಠಾಣೆ/ಸೈಬರ್ ಕ್ರೈಮ್ ಪೊಲೀಸ್ ಠಾಣೆಯಲ್ಲಿ ಪ್ರಥಮ ವರ್ತಮಾನ ವರದಿ (ಎಫ್.ಐ.ಆರ್) ನ್ನು ದಾಖಲಿಸಲು ಸೂಚಿಸಿರುತ್ತಾರೆ.

ಅದರಂತೆ, ಒಟ್ಟು 58 ಖಾಸಗಿ ಶಾಲೆಗಳ ಪ್ರಥಮ/ಮಾನ್ಯತೆ ನವೀಕರಣ ಪ್ರಕರಣಗಳಲ್ಲಿ ಉಂಟಾಗಿರುವ ಅಕ್ರಮಗಳ ಕುರಿತು ಉಪನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ವಿಜಯಪುರ ಇವರು ಸೈಬರ್ ಕ್ರೈಮ್ ಪೊಲೀಸ್ ಠಾಣೆ ವಿಜಯಪುರ. ಇಲ್ಲಿ ದಿನಾಂಕ: 25-02-2026ರಂದು, ಪ್ರಕರಣ ಸಂಖ್ಯೆ: 0014/2026 ನ್ನು ದಾಖಲಿಸಿದ್ದು, ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ. ತನಿಖಾ ವರದಿಯನ್ನು ಆಧರಿಸಿ, ತಪ್ಪಿತಸ್ಥ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ನಿಯಮಾನುಸಾರ ಸೂಕ್ತ ಶಿಸ್ತು ಕ್ರಮವನ್ನು ಜರುಗಿಸಲು ಕ್ರಮ ವಹಿಸಲಾಗುವುದು.

ಇದಲ್ಲದೇ, ಪ್ರಥಮ ಮಾನ್ಯತೆ / ಮಾನ್ಯತೆ ನವೀಕರಣ ತಂತ್ರಾಂಶದಲ್ಲಿನ ವಹಿವಾಟುಗಳ ದಾಖಲೆಗಳನ್ನು ಪರಿಶೀಲಿಸಲು ಸ್ವತಂತ್ರ ಸಮಿತಿಯನ್ನು ರಚಿಸಲಾಗುವುದು. ಸದರಿ ಸಮಿತಿಯು ಗುರುತಿಸುವ ತಪ್ಪಿತಸ್ಥರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

**ಸಂಖ್ಯೆ:** ಇಪಿ 52 ಡಿಎಆರ್ 2026

(ಎಸ್.ಮಧು ಬಂಗಾರಪ್ಪ)

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರು.